# ಮರ ಆಧಾರಿತ ಕೃಷಿ ಇಂದಿನ ಅವಶ್ಯಕತೆ

**ವೆಂಕಟೇಶ್ ಎಲ್. ಮತ್ತು ರಾಜಕುಮಾರ ಕನ್ನೂರ**
ಕೃಷಿ ವಿಜ್ಞಾನ ಕೇಂದ್ರ, ಶಿರಸಿ–581 401
☎: 9482023466 **ಮಿಂಚಂಚೆ:** venkateshl@uasd.in

**ಅರಣ್ಯದಲ್ಲಿ ಬೆಳೆಯಬಹುದಾದ ಮರ ಗಿಡಗಳನ್ನು ಬೇಸಾಯ ಕ್ಷೇತ್ರದೊಂದಿಗೆ ಬೆಳೆಸಿ ನಿರ್ವಹಿಸುವುದರಿಂದ ಅನೇಕ ಬೆಳೆಗಳಲ್ಲಿ ಇಳುವರಿ ಹೆಚ್ಚಿದೆ ಎಂಬುದು ಲೇಖಕರ ಅಭಿಪ್ರಾಯ. ಕೆಲವೊಂದು ಅಪವಾದಗಳನ್ನು ಹೊರತು ಪಡಿಸಿ ಅರಣ್ಯ ಕೃಷಿಯಿಂದ ಲಾಭ ಆಗುವ ಸಂಭವ ಜಾಸ್ತಿ. ಮಾರ್ಚ್ 21 "ವಿಶ್ವ ಅರಣ್ಯ ದಿನ" ತನ್ನಿಮಿತ್ತ ಈ ಲೇಖನ.**

ಕೃಷಿ ಪದ್ಧತಿಯು ಬಹಳ ವರ್ಷಗಳ ಹಿಂದೆಯೇ ನಮಗೆಲ್ಲ ತಿಳಿದ ವಿಷಯ. ಇದರಲ್ಲಿ ಅನೇಕ ಪದ್ಧತಿಗಳು ಇದ್ದರೂ ಅದರಲ್ಲಿ ಅರಣ್ಯ ಕೃಷಿಯೂ ಬಹಳ ಮುಖ್ಯವಾದದ್ದು. ಏಕೆಂದರೆ ಒಂದೇ ಪ್ರದೇಶ ನಿರ್ದಿಷ್ಟ ಭೂಮಿಯಲ್ಲಿ ಅರಣ್ಯ ಬೆಳೆಗಳು ಹಾಗೂ ಕೃಷಿ ಬೆಳೆಯೂ ಏಕಕಾಲಕ್ಕೆ ಬೆಳೆಯುವುದರಿಂದ ಅಲ್ಲಿರುವ ದನಕರುಗಳಿಗೂ ಕೂಡ ಆಹಾರ ಸಿಕ್ಕು, ರೈತರಿಗೆ ಆದಾಯ ದೊರಕುತ್ತದೆ.

ರೈತರು ಬಹಳ ಹಿಂದಿನ ಕಾಲದಿಂದಲೂ ತಮ್ಮ ಭೂಮಿಯಲ್ಲಿ ಕೃಷಿ ಬೆಳೆಗಳ ಜೊತೆಗೆ ವಿವಿಧ ಗಿಡಮರಗಳನ್ನು ಬೆಳೆಯುವುದು ರೂಢಿಯಲ್ಲಿದೆ. ಕೃಷಿ ಅರಣ್ಯ ಪದ್ಧತಿಯ ಸುಸ್ಥಿರವಾದ ಬೇಸಾಯ ಪದ್ಧತಿ. ಈ ಪದ್ಧತಿಯಲ್ಲಿ ಗಿಡಗಳಿಂದ ಕೃಷಿ ಬೆಳೆಗಳ ಇಳುವರಿಯು ಕಡಿಮೆಯಾದರೂ ಗಿಡಗಳಿಂದ ಬರುವ ಆದಾಯದಿಂದ ಒಟ್ಟು ಉತ್ಪಾದನೆಯು ಸ್ಥಿರವಾಗಿ ಉಳಿಯುತ್ತದೆ. ಆದ್ದರಿಂದ ರೈತರು ತಮ್ಮ ಹೊಲಗಳಲ್ಲಿ ಅಲ್ಲೊಂದು ಇಲ್ಲೊಂದು ಗಿಡಗಳನ್ನು ಬೆಳೆದು ಆದ್ದರಿಂದ ಆಹಾರ, ಉರುವಲು ಕಟ್ಟಿಗೆ, ಮೇವು, ಎಳೆ ಮುಂತಾದವುಗಳನ್ನು ಪಡೆದು ತಮ್ಮ ಸ್ವಂತಕ್ಕೆ ಉಪಯೋಗಿಸುತ್ತಾರೆ. ಈ ಪ್ರಯೋಗದಲ್ಲಿ ಈ ಕೆಳಗಿನ ವಿವಿಧ ಗಾತ್ರದ ಹಾಗೂ ಬೆಳವಣಿಗೆ ಗತಿಯ ಗಿಡಗಳನ್ನು ಅಳವಡಿಸಲಾಗಿತ್ತು. 1. ಬೇವು 2. ಸಿಸ್ಸು 3.ಮಾವು 4. ಹುಣಸೆ 5. ಬನ್ನಿ 6. ಕಂಜಾಲಿ 7. ಬೂರಲ 8. ತಾರೆ 9. ಗಾಳಿ 10. ನೀಲಗಿರಿ ಮುಂತಾದವು.

**ಅರಣ್ಯ ಕೃಷಿಯಲ್ಲಿ ಯಾವ ಅರಣ್ಯ ಬೆಳೆ ಸೂಕ್ತ**

ಈ ಪ್ರಶ್ನೆ ಅನೇಕ ರೈತರನ್ನು ಕಾಡುವುದು ಅದಕ್ಕೆ ಉತ್ತರ ಇಲ್ಲಿದೆ.

- ➢ ಒಣ ಭೂಮಿಯಲ್ಲಿ ಬೆಳೆಯುವ ಅರಣ್ಯಬೆಳೆಗಳು: ಬೇವು, ಹೆಬ್ಬೇವು, ನೀಲಗಿರಿ, ಶ್ರೀಗಂಧ
- ➢ ಒಣ ಭೂಮಿಯ ಮತ್ತು ಸ್ವಲ್ಪ ನೀರಿನ ಸೌಕರ್ಯ ಇದ್ದರೆ, ಸಾಗವಾನಿ. ಗಾಳಿ ಮರ, ಸುಬಾಬುಲ್, ಹಾಗೂ ಕ್ಯಾಲಿಯಾಂಡ್ರ

**ಗಿಡಗಳ ನಿರ್ವಹಣೆ:** ನೆಟ್ಟ ಸಸಿಗಳಿಗೆ ಪ್ರಾರಂಭದಲ್ಲಿ ಆಧಾರ ಒದಗಿಸಬೇಕು. ಬೇಸಿಗೆಯಲ್ಲಿ ನೀರು ಒದಗಿಸಿ ಸಸಿಯಯ ಸುತ್ತ ಒಣಗಿದ ಮರಗಳಿಂದ ಹೊದಿಕೆ ಮಾಡುವುದರಿಂದ ತೇವಾಂಶದ ಸಂರಕ್ಷಣೆಯಾಗಿ ಕಳೆಗಳ ನಿರ್ವಹಣೆಯಾಗುತ್ತದೆ.

**• ಗಾಳಿಮರ ಆಧಾರಿತ ಕೃಷಿ ಪದ್ಧತಿ**

ಈ ಮರವನ್ನು ಆಸ್ಟ್ರೇಲಿಯಾದಿಂದ ಸುಮಾರು 150 ವರ್ಷಗಳ ಪೂರ್ವದಲ್ಲಿ ಭಾರತಕ್ಕೆ ತರಲಾಯಿತು. ಇದು ವೇಗವಾಗಿ ಸಮುದ್ರ ತೀರದ ಮರಳಲ್ಲಿ ಮತ್ತು ಬೇರೆ ಪ್ರದೇಶದಲ್ಲಿ ಬೆಳೆಯುತ್ತದೆ. ಈ ಮರವನ್ನು ಹೊಲದ ಸುತ್ತಲೂ ಬದುವಿನ ಮೇಲೆ ಹಾಗೂ ನೀರಾವರಿ ಕಾಲುವೆ ಗುಂಟ ಬೆಳೆಯಬಹುದು.

- ➢ ಗಾಳಿ ಗಿಡಗಳನ್ನು 10 ಮೀ. x 10 ಮೀ. ಅಂತರದಲ್ಲಿ ಸೋಯಾಬಿನ್ ಜೊತೆಗೆ ಬೆಳೆದಾಗ ಖರ್ಚು ಆದಾಯದ ಅನುಪಾತವೂ 1 : 1.91 ಇರುತ್ತದೆ.
- ➢ ಒಂದು ಗಿಡದಿಂದ 7–9 ವರ್ಷದ ನಂತರ ರೂ 1000–2000 ಆದಾಯ ಪಡೆಯಬಹುದು.

**• ಬೀಟೆ ಆಧಾರಿತ ಕೃಷಿ ಪದ್ಧತಿ**

ಇದು ಅತಿ ಬೆಲೆ ಬಾಳುವ ಮರವಾಗಿದ್ದು ಇದರ

ಕಟ್ಟಿಗೆ ಪರದೇಶಗಳಿಗೆ "ರೋಜವುಡ್" ಎಂಬ ಹೆಸರಿನಿಂದ ರಫ್ತು ಮಾಡಲಾಗುತ್ತದೆ. ಪ್ರತಿ ಗಿಡದಿಂದ 8–10 ಕಿ.ಗ್ರಾಂ ಸೊಪ್ಪನ್ನು ಪ್ರತಿ ವರ್ಷ ಪಡೆಯಬಹುದು. ಅದರ ಜೊತೆಗೆ ಮಣ್ಣಿನ ಸಾರಜನಕವನ್ನು ಹೆಚ್ಚಿಸುತ್ತದೆ.

- ಬೀಟೆ ಗಿಡಗಳನ್ನು ಕೃಷಿ ಅರಣ್ಯ ಪದ್ಧತಿಯಲ್ಲಿ (10 ಮೀ. x 10 ಮೀ.) ಬೆಳೆಯುವುದರಿಂದ 10 ರಿಂದ 12 ವರ್ಷಗಳ ನಂತರ ಪ್ರತಿ ವರ್ಷ ಪ್ರತಿ ಹೆಕ್ಟೇರಿಗೆ ರೂ 10,860 ನಿವ್ವಳ ಆದಾಯ ಪಡೆಯಬಹುದು
- ಒಂದು ಗಿಡದಿಂದ 16–18 ನೆಯ ವರ್ಷದ ನಂತರ ರೂ 8500–10,000 ಆದಾಯ ಪಡೆಯಬಹುದು.

**ಹುಣಸೆ ಆಧಾರಿತ ಕೃಷಿ ಪದ್ಧತಿ:** ಹುಣಸೆ ಮರವು ಭಾರತದ ಒಣ ಹವೆಯ ಎಲ್ಲ ಪ್ರದೇಶಗಳಲ್ಲಿ ಕಂಡುಬರುತ್ತದೆ. ದಿನಬಳಕೆಯ ಅಡಿಗೆಯ ರುಚಿಗಾಗಿ ರಸ್ತೆ ಬದಿಗೆ ಈ ಮರವನ್ನು ನೆಡಲಾಗುತ್ತದೆ.ಇದರ ಬೀಜಗಳಲ್ಲಿ ಪೆಕ್ಟಿನ್ ಇರುವುದರಿಂದ ಜಾಮ್ ಜೆಲ್ಲಿ ಮತ್ತು ಇನ್ನಿತರೆ ಸಿಹಿ ಪದಾರ್ಥಗಳ ತಯರಿಕೆಯಲ್ಲಿ ಉಪಯೋಗಿಸಲಾಗುತ್ತದೆ.

- ಹುಣಸೆಯನ್ನು ಸೋಯಾಬೀನ್ ಬೆಳೆಗಳೊಂದಿಗೆ 10 ಮೀ. x 10 ಮೀ. ಅಂತರದಲ್ಲಿ ಬೆಳೆದಾಗ ಖರ್ಚು ಆದಾಯದ ಅನುಪಾತವು 1 : 1.78 ಇರುತ್ತದೆ.
- ಪ್ರತಿ ಗಿಡದಿಂದ 6 ವರ್ಷಗಳ ನಂತರ 10–15 ಕಿ. ಗ್ರಾಂ ಹುಣಸೆ ಹಣ್ಣನ್ನು ಪಡೆಯಬಹುದು. ಬೇಸಿಗೆಯಲ್ಲಿ 1–2 ಸಾರಿ ನೀರು ಕೊಡುವುದರಿಂದ ಹೆಚ್ಚಿನ ಇಳುವರಿ ಕಂಡು ಬರುತ್ತದೆ.

**ಸಾಗವಾನಿ / ನೆಡುತೋಪು:** ಸಾಮಾನ್ಯವಾಗಿ ಸಾಗವಾನಿ ಮರವು ಬರಡು ಭೂಮಿಯಲ್ಲಿ ಬೆಳೆಯುವ ಮರ, ಇದಕ್ಕೆ ಕೃಷಿ ಭೂಮಿಯ ಅವಶ್ಯಕತೆಯಿಲ್ಲ.

**ಸಸಿ ನೆಡುವ ಮುನ್ನ ಬರಡು ಭೂಮಿಯಲ್ಲಿ ತೆಗೆದುಕೊಳ್ಳಬಹುದಾದ ಕ್ರಮಗಳು**

- ಮೊದಲಿಗೆ ಬರಡು ಭೂಮಿಯಲ್ಲಿರುವ ಕಳೆಗಳು ಮತ್ತು ಕಂಟೆ ಗಿಡಗಳನ್ನು ತೆಗೆಯುವುದು.
- ತದ ನಂತರ ಹೊಲ ಉಳುವುದು
- ಸಸಿಯಿಂದ ಸಸಿಗೆ 3 ಅಡಿ ಅಂತರವಿರುವ ಹಾಗೆ ಗುಂಡಿ ತೋಡುವುದು
- ಒಂದು ಸಾಲಿನಿಂದ ಇನ್ನೊಂದು ಸಾಲಿಗೆ 4 ಅಡಿ ಅಂತರವಿರಬೇಕು.
- ಸಸಿ ನೆಡುವುದಕ್ಕಿಂತ ಮುಂಚೆ ಗುಂಡಿಯಲ್ಲಿ ಕಾಂಪೋಸ್ಟ್ ಹಾಕಿ ಸಸಿ ನೆಡಬೇಕು ಅದಾದ ನಂತರ ಸ್ವಲ್ಪ ನೀರುಣಿಸಬೇಕು
- ವಾರಕ್ಕೆ ಎರಡು ಸಲ ನೀರು ಹಾಯಿಸಬೇಕು
- ತಿಂಗಳಲ್ಲಿ ಒಂದು ಸಲ ಕಸ ಮತ್ತು ಕಳೆಯನ್ನು ತೆಗೆಯುವುದು ಅದರಲ್ಲಿ ಯಾವುದಾದರು ದನಕರುಗಳಿಗೆ ಆಹಾರವಾಗಿದ್ದಲ್ಲಿ ಅದನ್ನು ದನಗಳಿಗೆ ಹಾಕುವುದು
- ಇದರ ಇಳುವರಿಯು ಸುಮಾರು 12 ರಿಂದ 15 ವರ್ಷಗಳಲ್ಲಿ ಬರುವುದು.
- ಅರ್ಧ ಎಕರೆ ಭೂಮಿಯೊಳಗೆ ಅಂದಾಜು ಒಂದು ಲಕ್ಷ ರೂಪಾಯಿ ಗಳಿಸಬಹುದು.

ಅರಣ್ಯ ಕೃಷಿಯಿಂದ ಕೇವಲ ಆದಾಯ ಅಷ್ಟೆಯಲ್ಲ ಅದರ ಜೊತೆಗೆ ಮಣ್ಣಿನ ಫಲವತ್ತತೆಯನ್ನು ಕೂಡ ಹೆಚ್ಚಿಸುವುದು. ಸುತ್ತಮುತ್ತಲ್ಲಿರುವ ಕೃಷಿ ಬೆಳೆಗಳ ಬೆಳವಣಿಗೆಯೂ ಕೂಡ ಹೆಚ್ಚುತ್ತದೆ. ಅರಣ್ಯ ಕೃಷಿ ಪದ್ಧತಿಯಲ್ಲಿ ಅರಣ್ಯ ಬೆಳೆಗಳನ್ನು ಬದುವುಗಳ ಮೇಲೆ ಬೆಳೆಸಬಹುದು ಇದರಿಂದ ಬದುಗಳ ಮಣ್ಣು ಗಟ್ಟಿಯಾಗಿರುವುದು. ಮಣ್ಣಿನ ಸವಕಳಿಯನ್ನು ಕಡಿಮೆಗೊಳಿಸಬಹುದು ಹಾಗೂ ನೀರನ್ನು ಹಿಡಿದುಕೊಳ್ಳುವ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಅರಣ್ಯಕೃಷಿಯಿಂದ ರೈತರ ಆರ್ಥಿಕ ಪರಿಸ್ಥಿತಿ ಸುಧಾರಿಸುವುದು. ಇವೆಲ್ಲ ಕ್ರಮಗಳು ಸಾಗವಾನಿಗೆ ಮಾತ್ರ ಸಂಬಂಧಿಸಿದ್ದಲ್ಲ, ಅದು ಎಲ್ಲ ಅರಣ್ಯ ಬೆಳೆಗಳಿಗೂ ಅನ್ವಯವಾಗುವುದು.

**ಹೆಬ್ಬೇವು ಕೃಷಿ ಅರಣ್ಯ**

ಪ್ರತಿ 10 ರಿಂದ 15 ಚದರ ಅಡಿಗೊಂದರಂತೆ ಈ ಮರಗಳನ್ನು ನೆಡುವುದರಿಂದ ಆರಂಭದಲ್ಲಿಯೇ ಇದರ ಜೊತೆಗೆ ಮೂರು ವರ್ಷದವರೆಗೆ ತರಕಾರಿ ಹಾಗೂ ನೆರಳಾಧಾರಿತ ಬೆಳೆಗಳನ್ನು ಬೆಳೆಯಬಹುದು. ಆಗ ಹೆಬ್ಬೇವಿಗೆ ಪ್ರತ್ಯೇಕ ನೀರು ಒದಗಿಸುವ ಅವಶ್ಯಕತೆ ಇರುವುದಿಲ್ಲ. ಮೂರು ವರ್ಷಗಳ ನಂತರ ಹೆಬ್ಬೇವು ಎತ್ತರಕ್ಕೆ ಬೆಳೆಯುವುದರಿಂದ ಆ ನಂತರ ಇದರಲ್ಲಿ ವಿಳ್ಯದೆಲೆ, ಕಾಳುಮೆಣಸು, ಕನಕಾಂಬರಿ ಹೂ, ಶುಂಠಿ, ಅರಿಷಿಣ ಮುಂತಾದ ನೆರಳಾಶ್ರಿತ ಬೆಳೆಗಳನ್ನು ಬೆಳೆದುಕೊಳ್ಳಬಹುದು. ಗಿಡದ ಕೊಂಬೆಗಳನ್ನು ಆಗಾಗ ಕತ್ತರಿಸುತ್ತಿರಬೇಕು. ಇದರ ಎಲೆಗಳು ಕುರಿಗಳಿಗೆ ಅತಿ ಪ್ರಿಯವಾದ ಆಹಾರವಾಗಿದೆ. ಹೀಗಾಗಿ ಒಂದು ಎಕರೆ ಹೆಬ್ಬೇವು ಹಾಗೂ ಸುತ್ತ ಬೆಳೆಯುವ ಹುಲ್ಲಿನಲ್ಲಿ ಕನಿಷ್ಠ 10 ರಿಂದ 12 ಆಡು ಕುರಿಗಳನ್ನು ಸಾಕಣೆ ಮಾಡಬಹುದು.

ಇದನ್ನು ಕಟಾವು ಮಾಡಿದ ನಂತರ ಕೂಡ ಇದು ಕುಳೆ ಬೆಳೆಯಾಗಿ ಬೆಳೆಯುತ್ತದೆ. ಆದರೆ ಎಲ್ಲ ಕೊಂಬೆಗಳನ್ನು ಕತ್ತರಿಸಿ ಒಂದೇ ಒಂದು ನೇರವಾದ ಕೊಂಬೆಯನ್ನು ಬೆಳೆಯುವಂತೆ ಮಾಡಿ ಉಳಿದವುಗಳನ್ನು ಕತ್ತರಿಸಿ ತೆಗೆಯಬೇಕು. ಹೀಗೆ ಕುಳೆಯಿಂದ ಬೆಳೆದ ಮರವನ್ನು 5 ರಿಂದ 6 ವರ್ಷಗಳವರೆಗೆ ಬಿಟ್ಟಾಗ ನಮಗೆ ಮೊದಲಿನಂತೆಯೇ ಆದಾಯ ಸಿಗುತ್ತದೆ.

**ಮಾರುಕಟ್ಟೆ ವಹಿವಾಟು**

ಇತ್ತೀಚಿನ ಮಾರುಕಟ್ಟೆ ದರ ಪ್ರಕಾರ ಪ್ರತಿ ಘನ ಅಡಿ ಹೆಬ್ಬೇವು ಮರಮಟ್ಟಿನ ಬೆಲೆಯು ರೂ. 400-425/-. ಹತ್ತು-ಹನ್ನೆರಡು ವರ್ಷದ ಮರವು ಸರಾಸರಿ 14 ಘನ ಅಡಿ ಮರಮಟ್ಟು ಉತ್ಪಾದಿಸಿದರೆ, ಅದರ ಬೆಲೆ ರೂ. 5600/-. ಬದುನೆಡುವಿಕೆ ಪದ್ಧತಿಯ ಕೃಷಿ ಅರಣ್ಯದಲ್ಲಿ 4 ಮೀ ಅಂತರದಲ್ಲಿ ಶೇಕಡ 80 ರಷ್ಟು ಮರಗಳು ಬದುಕುಳಿದರೆ ಒಂದು ಹೆಕ್ಟೇರಿಗೆ ಒಟ್ಟು 80 ಮರಗಳು ಇದ್ದು ಒಂದು ಮರಕ್ಕೆ 14 ಘನ ಅಡಿಯಂತೆ 10-12 ವರ್ಷಗಳಲ್ಲಿ 1120 ಘನ ಅಡಿ ಮರಮಟ್ಟನ್ನು ಉತ್ಪಾದಿಸಿ ರೂ. 4,48,000/- ಗಳನ್ನು ಪಡೆಯಲು ಸಾಧ್ಯ. ನೆಡುತೋಪುಗಳಲ್ಲಿ ಹಾಗೂ ಕೃಷಿ ಅರಣ್ಯದಲ್ಲಿ 6 ಮೀ x 4 ಮೀ ಅಂತರದಲ್ಲಿ ಒಂದು ಹೆಕ್ಟೇರ್ ಹೆಬ್ಬೇವು ಬೆಳೆದು, ಶೇಕಡ 80 ರಷ್ಟು ಬದುಕುಳಿದ ಪಕ್ಷದಲ್ಲಿ ಒಟ್ಟು 333 ಮರಗಳು 10-12 ವರ್ಷಗಳಲ್ಲಿ 4,662 ಘನ ಅಡಿ ಮರಮಟ್ಟು ಉತ್ಪಾದಿಸಿ ಸುಮಾರು ರೂ. 18,64,800/- ಆದಾಯ ಸಾಧ್ಯ.

****

## ಲೇಖಕರಲ್ಲಿ ವಿನಂತಿ




ಲೇಖಕರ ಸಂಖ್ಯೆ ಇಬ್ಬರಿಗೆ ಸೀಮಿತವಿರಲಿ. ಲೇಖನಕ್ಕೆ ಸಂಬಂಧಿಸಿದ ಛಾಯಾಚಿತ್ರಗಳನ್ನು ಸಾಫ್ಟ್ ಪ್ರತಿ ಮೂಲಕ ಸಂಪಾದಕರ ಮಿಂಚಂಚೆಗೆ (editor@uasd.in) ಕಳುಹಿಸಬೇಕು. ಆಯಾ ಹಂಗಾಮಿಗೆ ತಕ್ಕಂತಹ ಲೇಖನಗಳನ್ನು ಸಾಕಷ್ಟು ಮೊದಲೇ (ಕನಿಷ್ಠ ಒಂದೂವರೆ ತಿಂಗಳು ಮೊದಲು) ತಲುಪಿಸಬೇಕು. ಬೇರೆ ಪತ್ರಿಕೆಗಳಿಗೆ ಈಗಾಗಲೇ ಸಲ್ಲಿಸಿರುವ ಲೇಖನಗಳನ್ನು ಕೃಷಿ ಮುನ್ನಡೆ ಪರಿಗಣಿಸುವುದಿಲ್ಲ. ದಯಮಾಡಿ ಅಂಥ ಲೇಖನಗಳನ್ನು ಕೃಷಿ ಮುನ್ನಡೆಗೆ ಕಳುಹಿಸಬೇಡಿ. ನಿಮ್ಮ ದೂರವಾಣಿ ಸಂಖ್ಯೆ ತಿಳಿಸಲು ಮರೆಯದಿರಿ.

– ಸಂ.